


ಜನರಲ್ ಮ್ಯಾನೇಜರ್ ಆಗಿಯೂ, ನಾನು ಎರಡನೆಯ ಮಹಿಳಾ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದಿದ್ದೆವು. ನಮಗೆ ಮೊದಲು ಜನರಲ್ ಮ್ಯಾನೇಜರ್ ಆಗುವ ಸಾಮರ್ಥ್ಯ ಇದ್ದ ಮಹಿಳೆಯರು ಇರಲಿಲ್ಲ ಎಂದಲ್ಲ. ಈ ಕಾರ್ಖಾನೆಗೆ ಮೊಟ್ಟಮೊದಲ ಡಿಸೈನ್ ಇಂಜಿನಿಯರ್ ಆಗಿ 1975ರಲ್ಲಿ ಕೆ.ಎನ್. ಮಾಲತಿ ಅವರು ಸೇರಿದ್ದರು. ಅವರು ನಮ್ಮ ಕಾರ್ಖಾನೆಯ ಮೊಟ್ಟ ಮೊದಲ ಮಹಿಳಾ ಅಡಿಶನಲ್ ಜನರಲ್ ಮ್ಯಾನೇಜರ್ ಕೂಡ ಆದರು. ಅತ್ಯಂತ ಸಮರ್ಥರಿದ್ದರು. ದಿಟವಾಗಿ ಅವರು ದಶಕದ ಹಿಂದೆಯೇ ಮೊದಲ ಮಹಿಳಾ ಜನರಲ್ ಮ್ಯಾನೇಜರ್ ಆಗಬೇಕಿತ್ತು. ಆದರೆ ಅಂದು 'ಗ್ಲಾಸ್ ಸೀಲಿಂಗ್' ಬಹಳ ಗಟ್ಟಿಯಾಗಿತ್ತು.

'ಮಹಿಳಾ ಅಧಿಕಾರಿಯ ಆದೇಶವನ್ನು ಪಾಲಿಸುವ ರೀತಿಯಲ್ಲಿ ಸೇನಾ ಪಡೆಗಳು ಇನ್ನೂ ಮಾನಸಿಕವಾಗಿ ಸಿದ್ಧವಾಗಿಲ್ಲ' ಎಂಬ ಪುಂಡು ವಾದವನ್ನು ಸೂಕ್ಷ್ಮವಾಗಿ ಗಮನಿಸಿ. ಇದು ಕೇವಲ ಮಹಿಳೆಯ ಪ್ರಶ್ನೆಯಲ್ಲ. ಸಾಧಾರಣ ಸಿವಿಲ್ ಕೆಲಸಗಳಲ್ಲೂ ಮೇಲಧಿಕಾರಿಗಳ ಆದೇಶವನ್ನು ಪಾಲಿಸದಾಗ, 'ಇನ್‌ಸಬಾರ್ಡಿನೇಷನ್' ಎಂದು ಕ್ರಮ ತೆಗೆದುಕೊಳ್ಳಲಾಗುತ್ತದೆ. ಹೀಗಿರುವಾಗ, ಮಿಲಿಟರಿ ರಂಗದಲ್ಲಿ, ಮುಖ್ಯಸ್ಥರ ಆದೇಶವನ್ನು ಪಾಲಿಸದೆ ಇರುವುದು ಗಂಭೀರವಾದ ಅಶಿಸ್ತಿನ ವಿಷಯ. ಕ್ರಮ ತೆಗೆದುಕೊಳ್ಳುವ ಶಿಕ್ಷಾರ್ಹ ಅವಿಧೇಯತೆ. ಹೀಗಿದ್ದೂ, ಮಹಿಳೆಯರಿಗೆ ಉನ್ನತ ಸ್ಥಾನವನ್ನು ನೀಡದೆ ಇರಲು ಏನೆಲ್ಲ ವಾದಗಳನ್ನು ಸರ್ಕಾರ ಮಂಡಿಸಿತು.

ಒಂದು ನಿಮಿಷ ಯೋಚಿಸಿ, ನೀವು ಒಂದು ಕಚೇರಿಯಲ್ಲಿ ಒಂದು ಹುದ್ದೆಯಲ್ಲಿ ಅತ್ಯಂತ ಸಮರ್ಥರಾಗಿ ದುಡಿಯುತ್ತಿದ್ದೀರಿ. ಆದರೆ ನಿಮಗೆ ಹತ್ತು ವರ್ಷವಾದರೂ ಮ್ಯಾನೇಜರ್ ಹುದ್ದೆಗೆ ಬಡ್ತಿ ಬರುವುದಿಲ್ಲ. ನೀವು ಹೋಗಿ ನಿಮ್ಮ ಹಿರಿಯ ಅಧಿಕಾರಿಗಳನ್ನು ಕೇಳುತ್ತೀರಿ. ಅವರು ಹೇಳುತ್ತಾರೆ, 'ಇತರ ಅಧಿಕಾರಿಗಳು ನಿಮ್ಮ ಕೆಳಗೆ ಕೆಲಸ ಮಾಡಲು ಸಿದ್ಧರಿಲ್ಲ'. ಅದಕ್ಕೆ ಕಾರಣ ನಿಮ್ಮ ಜಾತಿಯಾಗಿರಬಹುದು, ಜನಾಂಗವಾಗಿರಬಹುದು, ಇಲ್ಲ ಲಿಂಗವಾಗಿರಬಹುದು. ಇಂತಹ ವಾದವನ್ನು ಪ್ರತಿಯೊಬ್ಬ ಪ್ರಜೆಗೂ ಸಮಾನತೆಯ ಹಕ್ಕು ನೀಡಿದ ಸಂವಿಧಾನವಿರುವ ಭಾರತದಲ್ಲಿ ಒಪ್ಪಲು ಸಾಧ್ಯವೆ?

### ಸುಪ್ರೀಂ ಕಮಾಂಡರ್

ಪ್ರಧಾನಿ, ರಾಷ್ಟ್ರಪತಿ ಮತ್ತು ರಕ್ಷಣಾ ಮಂತ್ರಿಯ ಸ್ಥಾನವನ್ನು ಮಹಿಳೆ ಅದಾಗಲೇ ಅಲಂಕರಿಸಿರುವ ಹೆಮ್ಮೆಯ ಹಿನ್ನೆಲೆಯ ನಮ್ಮ

ಭೂಸೇನೆಯ ಸಾಹಸಿ ಪ್ಯಾರಾಗ್ಲೈಡರ್, ಕ್ಯಾಪ್ಟನ್ ಅಪರಾಜಿತಾ ಶರ್ಮ

